ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ
**Karnataka State Rural Development and Panchayat Raj University**
ರೈತ ಭವನ, ಜನರಲ್ ಕಾರ್ಯಪ್ಪ ವೃತ್ತ, ಗದಗ– 582 101
Raitha Bhavana, General Cariappa Circle, Gadag – 582 101
E-mail: ksrdpruadmissions@gmail.com Phone: 08372-230338, Fax: 08372-297343

ನಂ: ಆರ್.ಡಿ.ಪಿ.ಆರ್.ಯು 25 ಶೈಕ್ಷಣಿ 2021 ದಿನಾಂಕ: 24-09-2021

## 2021-22 ನೇ ಸಾಲಿಗೆ ತಿದ್ದುಪಡಿ ಪ್ರವೇಶ ಅಧಿಸೂಚನೆ

**ಉಲ್ಲೇಖ: 1) ವಿ.ವಿ ಸ್ನಾ.ಪ. ಪ್ರವೇಶ ಅಧಿಸೂಚನೆ ದಿನಾಂಕ: 23-7-2021 ಹಾಗೂ 04-09-2021.**
**2) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 24-09-2021.**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ 2021-22 ನೇ ಸಾಲಿಗೆ ಈ ಕೆಳಕಂಡ ವಿಷಯಗಳಲ್ಲಿ ಸ್ನಾತಕೋತ್ತರ ಪ್ರೋಗ್ರಾಮ್‌ಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಹಾಗೂ ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಅರ್ಜಿ ಸಲ್ಲಿಸುವ ದಿನಾಂಕವನ್ನು 25-10-2021 ರ ವರೆಗೆ ವಿಸ್ತರಿಸಲಾಗಿದೆ.

ಎಂ.ಪಿ.ಹೆಚ್. ಪ್ರೋಗ್ರಾಮ್‌ಗೆ ಮಾತ್ರ ಬಾಕಿ ಉಳಿದ ಸೀಟುಗಳಿಗಾಗಿ ಮೊದಲು ಅರ್ಜಿಸಲ್ಲಿಸಿದವರಿಗೆ ಮೊದಲ ಆದ್ಯತೆಯ ಮೇರೆಗೆ ಅರ್ಜಿಸಲ್ಲಿಸಿ ಪ್ರವೇಶ ಪಡೆದುಕೊಳ್ಳಲು 1-10-2021. ರಿಂದ 25-10-2021 ರ ವರೆಗೆ ದಿನಾಂಕವನ್ನು ವಿಸ್ತರಿಸಲಾಗಿದೆ.

| | | |
|---|---|---|
| ಎಂ.ಎ. | – | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ / ಗ್ರಾಮೀಣಾಭಿವೃದ್ಧಿ ಮತ್ತು ಸಹಕಾರ ನಿರ್ವಹಣೆ. |
| ಎಂ.ಎ. | – | ಸಾರ್ವಜನಿಕ ಆಡಳಿತ. |
| ಎಂ.ಎ. | – | ಅರ್ಥಶಾಸ್ತ್ರ (ಅಭಿವೃದ್ಧಿ ಅರ್ಥಶಾಸ್ತ್ರ). |
| ಎಂ.ಎಸ್.ಡಬ್ಲ್ಯೂ. | – | ಸಮುದಾಯ ಅಭಿವೃದ್ಧಿ / ಸಮುದಾಯ ಆರೋಗ್ಯ |
| ಎಂ.ಕಾಂ. | – | ಉದ್ಯಮ ಶೀಲತೆ/ ಸಹಕಾರ ನಿರ್ವಹಣೆ. |
| ಎಂ.ಎಸ್ಸಿ. | – | ಜಿಯೊಇನ್ಫಫಾರಮೆಟಿಕ್ಸ್. |
| ಎಂ.ಎಸ್ಸಿ. | – | ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ. |
| ಎಂ.ಎಸ್ಸಿ. | – | ಕಂಪ್ಯೂಟರ್ ಸೈನ್ಸ (ಡಾಟಾ ಅನೆಲೆಟಿಕ್ಸ). |
| ಎಂ.ಪಿ.ಹೆಚ್. | – | ಸಾರ್ವಜನಿಕ ಆರೋಗ್ಯ. |
| ಎಂ.ಬಿ.ಎ. | – | ಗ್ರಾಮೀಣ ನಿರ್ವಹಣೆ ಅಥವಾ ಕೃಷಿ ವ್ಯವಹಾರ ನಿರ್ವಹಣೆ. |

**ಅರ್ಜಿ ಸಲ್ಲಿಸಲು ಮಾರ್ಗಸೂಚಿಗಳು:**

- ಅರ್ಜಿ ನಮೂನೆ ಮತ್ತು ಅರ್ಹತೆ, ಪ್ರೋಗ್ರಾಮ್ ಶುಲ್ಕದ ಮಾಹಿತಿಯನ್ನು ವಿಶ್ವವಿದ್ಯಾಲಯದ ವೆಬ್ ಸೈಟ್ www.ksrdpru.ac.in ನಲ್ಲಿ ನೋಡಿ ಅರ್ಜಿಯನ್ನು ಡೌನ್ ಲೋಡ್ ಮಾಡಿಕೊಳ್ಳಬಹುದು. ಒಂದಕ್ಕಿಂತ ಹೆಚ್ಚಿನ ಕೋರ್ಸಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಪ್ರತಿ ಪ್ರೋಗ್ರಾಮ್‌ಗೆ ಪ್ರತ್ಯೇಕ ಅರ್ಜಿ ಹಾಗೂ ಅರ್ಜಿಯ ಶುಲ್ಕವನ್ನು ನೀಡಬೇಕು.
- ಅರ್ಜಿ ನಮೂನೆ, ಅರ್ಹತೆ ಮತ್ತು ಪ್ರೋಗ್ರಾಮ್‌ಗಳ ಶುಲ್ಕದ ಮಾಹಿತಿಯನ್ನು ವಿಶ್ವವಿದ್ಯಾಲಯದ ವೆಬ್ ಸೈಟ್ www.ksrdpru.ac.in ನಲ್ಲಿ ನೋಡಿ ಅರ್ಜಿಯನ್ನು ಡೌನ್ ಲೋಡ್ ಮಾಡಿಕೊಳ್ಳಬಹುದು. ಸಾಮಾನ್ಯ ವರ್ಗದ ಅಭ್ಯರ್ಥಿಗಳು ರೂ.200/- ಹಾಗೂ ಪ.ಜಾ/ಪ.ಪಂಗಡ/ಪ್ರವರ್ಗ-1/ವಿಕಲಚೇತನರು ರೂ.100/- ಅರ್ಜಿ ಶುಲ್ಕವನ್ನು "ಹಣಕಾಸು ಅಧಿಕಾರಿಗಳು, ಕೆ.ಎಸ್.ಆರ್.ಡಿ.ಪಿ.ಆರ್.ಯು. ಗದಗ," ಇವರ ಹೆಸರಿಗೆ ಡಿ.ಡಿ ಪಡೆದು, ಡಿ.ಡಿ ಹಿಂಭಾಗದಲ್ಲಿ ಅಭ್ಯರ್ಥಿಯ ಹೆಸರು, ಹಾಗೂ ಮೊಬೈಲ್ ನಂ. ನಮೂದಿಸಿ, ಭರ್ತಿ ಮಾಡಿ ಅಥವಾ ಅರ್ಜಿ ಶುಲ್ಕವನ್ನು ಆನ್-ಲೈನ್‌ಲ್ಲಿ ಸಹ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ SB Account Number: 31400100007777, Bank of Baroda, IFSC Code: BARB0GADAGX (5th letter stands for 'Zero') ಗೆ, NEFT / RTGS / UPI ಮುಖಾಂತರ ಪಾವತಿಸಿ, Transaction ID Screen Shot Print-Out ಪಡೆದು, ಭರ್ತಿ ಮಾಡಿದ ಅರ್ಜಿ / ಅರ್ಜಿಗಳನ್ನು "ಕುಲಸಚಿವರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಜನರಲ್ ಕಾರ್ಯಪ್ಪ ವೃತ್ತ, ಗದಗ," ಇವರಿಗೆ ಸೂಕ್ತ ದಾಖಲೆಗಳು ಹಾಗೂ ಸಂದಾಯಮಾಡಿದ ಮೂಲ ಶುಲ್ಕದ ರಸೀದಿ / Transaction ID Screen Shot Print-Out ಅನ್ನು ಲಗತ್ತಿಸಿ, ಖುದ್ದಾಗಿ / ತ್ವರಿತ ಅಂಚೆ / ಕೋರಿಯರ್ ಮೂಲಕ ಕೊನೆಯ ದಿನಾಂಕದೊಳಗೆ **(25-10-2021)** ರಂದು ಸಲ್ಲಿಸಬೇಕು.

- ವಿವಿಧ ಪ್ರೋಗ್ರಾಮ್‌ಗಳಿಗೆ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 301 ಜಿಪಸ 2017, ದಿನಾಂಕ: 17-10-2017 ರನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅರ್ಹ ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಬಹುದಾಗಿದ್ದು, ಪ್ರತಿ ಪ್ರೋಗ್ರಾಮ್‌ಗಳಿಗೆ **ಎರಡು (೨)** ಅಭ್ಯರ್ಥಿಗಳಿಗೆ ಮಾತ್ರ ಪ್ರವೇಶಾತಿಯನ್ನು ನೀಡಬಹುದಾಗಿದೆ, ಹೆಚ್ಚಿನ ವಿವರಗಳಿಗಾಗಿ ಮೇಲೆ ತಿಳಿಸಿರುವ ಕರ್ನಾಟಕ ಸರ್ಕಾರದ ಆದೇಶವನ್ನು ವಿ.ವಿ.ಯ ವೆಬ್ ಸೈಟ್‌ನಲ್ಲಿ ನೋಡಬಹುದಾಗಿರುತ್ತದೆ. ಅಂತಹ ಅಭ್ಯರ್ಥಿಗಳಿಗೆ ಪ್ರೋಗ್ರಾಮ್‌ಗಳ ಹಾಗೂ ಇನ್ನಿತರೆ ಶುಲ್ಕಗಳಲ್ಲಿ ಯಾವುದೇ ವಿನಾಯಿತಿ ಇರುವುದಿಲ್ಲ ಮತ್ತು ಅರ್ಜಿಗಳನ್ನು ಸಮುಚಿತ ಮಾರ್ಗದಿಂದ ಸಲ್ಲಿಸಬೇಕು.
- ಅಪೂರ್ಣ ಅರ್ಜಿಗಳಿದ್ದಲ್ಲಿ (ಪೂರಕ ದಾಖಲೆಗಳು ಇಲ್ಲದ ಪ್ರಕರಣಗಳಿದ್ದಲ್ಲಿ) ಯಾವುದೇ ಮುನ್ಸೂಚನೆ ನೀಡದೇ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- **ಮೇಲಿನ ವಿಷಯಗಳಿಗೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಗಾಗಿ ಕೆಳಕಂಡ ಪ್ರವೇಶಾತಿ ಸಂಯೋಜಕರನ್ನು ಸಂಪರ್ಕಿಸಬಹುದಾಗಿದೆ:**

| ಕ್ರ. ಸಂ | ಸ್ನಾತಕೋತ್ತರ ಪ್ರೋಗ್ರಾಮ್ | ಮೊಬೈಲ್ ನಂ |
|---|---|---|
| 1 | ಎಂ.ಎ. – ಆರ್‌ಡಿಪಿಆರ್ | 7353467453 |
| 2 | ಎಂ.ಎ. – ಸಾರ್ವಜನಿಕ ಆಡಳಿತ | 8095451616 |
| 3 | ಎಂ.ಎ. – ಅರ್ಥಶಾಸ್ತ್ರ (ಅಭಿವೃದ್ಧಿ ಅರ್ಥಶಾಸ್ತ್ರ) | 8792734641 |
| 4 | ಎಂ.ಎಸ್.ಡಬ್ಲ್ಯೂ | 8217721324 |
| 5 | ಎಂ.ಕಾಂ. | 9611911164 |
| 6 | ಎಂ.ಬಿ.ಎ. | 7829864257 |
| 7 | ಎಂ.ಎಸ್ಸಿ. – ಜಿಯೋಇನ್ಫರ್ಮ್ಯಾಟಿಕ್ | 8310579415 |
| 8 | ಎಂ.ಎಸ್ಸಿ. – ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ | 7026411632 |
| 9 | ಎಂ.ಎಸ್ಸಿ. – ಕಂಪ್ಯೂಟರ ಸೈನ್ಸ್ (ಡಾಟಾ ಅನಲೆಟಿಕ್ಸ) | 9980205502 |
| 10 | ಎಂ.ಪಿ.ಹೆಚ್. – ಸಾರ್ವಜನಿಕ ಆರೋಗ್ಯ | 9980791212 |

**ಹೆಚ್ಚಿನ ಮಾಹಿತಿಗಾಗಿ – 9880614637 /8310579415.**

**ಪ್ರವೇಶಾತಿ ಮಾಹಿತಿ ಕೇಂದ್ರ – 7975202206 / 7795100729.**

| | | |
|---|---|---|
| ಅ) | ದಂಡ ಶುಲ್ಕವಿಲ್ಲದೆ ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ | 25-10-2021 |
| ಆ) | ತಾತ್ಕಾಲಿಕ ಜೇಷ್ಠತಾಪಟ್ಟಿ ಪ್ರಕಟಿಸುವ ದಿನಾಂಕ | 27-10-2021 |
| ಇ) | ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ದೋಷಗಳ ಬಗ್ಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 29-10-2021 |
| ಈ) | ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸುವ ದಿನಾಂಕ ಎಂ.ಬಿ.ಎ. ಯನ್ನು ಹೊರತುಪಡಿಸಿ ಇತರೆ ಸ್ನಾತಕೋತ್ತರ ಪದವಿಗಳಿಗೆ ಕೌನ್ಸೆಲಿಂಗ ಮತ್ತು ಪ್ರವೇಶ ಪ್ರಕ್ರಿಯೆ ಪ್ರಾರಂಭ ದಿನಾಂಕ | 30-10-2021 ಮತ್ತು 6-11-2021 |
| ಉ) | ಕೌನ್ಸೆಲಿಂಗ ಮತ್ತು ಪ್ರವೇಶ ಪ್ರಕ್ರಿಯೆ ನಿರೀಕ್ಷಣಾ ಪಟ್ಟಿಯಲ್ಲಿರುವ ಎಂ.ಬಿ.ಎ. ಯನ್ನು ಹೊರತುಪಡಿಸಿ ಇತರೆ ಸ್ನಾತಕೋತ್ತರ ಪದವಿಗಳಿಗೆ ವಿದ್ಯಾರ್ಥಿಗಳಿಗೆ ಪ್ರವೇಶ ಪ್ರಾರಂಭ ದಿನಾಂಕ (Wait List) | 8-11-2021 |
| ಊ) | ಪ್ರಥಮ ಸೆಮಿಸ್ಟರ್ ತರಗತಿಗಳು ಪ್ರಾರಂಭವಾಗುವ ದಿನಾಂಕ | 8-11-2021 |

**ಸೂಚನೆ:** ೧) ತಾತ್ಕಾಲಿಕ ಜೇಷ್ಠತಾಪಟ್ಟಿ ಪ್ರಕಟಿಸುವ ದಿನಾಂಕ, ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ದೋಷಗಳ ಬಗ್ಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸುವ ದಿನಾಂಕ ಎಂ.ಬಿ.ಎ. ಯನ್ನು ಹೊರತುಪಡಿಸಿ ಇತರೆ, ಸ್ನಾತಕೋತ್ತರ ಪದವಿಗಳಿಗೆ ಕೌನ್ಸೆಲಿಂಗ ಮತ್ತು ಪ್ರವೇಶ ಪ್ರಕ್ರಿಯೆ ಪ್ರಾರಂಭ ಹಾಗೂ ಪ್ರಥಮ ಸೆಮಿಸ್ಟರ್ ತರಗತಿಗಳು ಪ್ರಾರಂಭವಾಗುವ ದಿನಾಂಕಗಳನ್ನು ನಂತರ ತಿಳಿಸಲಾಗುವುದು. (ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್ ನೋಡುವುದು).

೨) ಎಂ.ಬಿ.ಎ–ಗ್ರಾಮೀಣ ನಿರ್ವಹಣೆ / ಕೃಷಿ ವ್ಯವಹಾರ ನಿರ್ವಹಣೆ ಪ್ರೋಗ್ರಾಮ್‌ಗೆ **ಕರ್ನಾಟಕ ಪರೀಕ್ಷಾ ಪ್ರಾಧಿಕಾರ** KEA MBA-PGCET ದಿಂದ ಬಂದ ಅಭ್ಯರ್ಥಿಗಳನ್ನು ತುಂಬಲಾಗುವುದು. ಯಾವುದೇ ಖಾಲಿ ಉಳಿದ ಸೀಟುಗಳಿಗೆ **ವಿಶ್ವವಿದ್ಯಾಲಯದ ಪ್ರವೇಶ ಪರೀಕ್ಷೆ ಮೂಲಕ** ಅಭ್ಯರ್ಥಿಗಳಿಗೆ ಪ್ರವೇಶ ನೀಡಲಾಗುವುದು. ಇತರೆ ಪ್ರೋಗ್ರಾಮ್‌ಗಳಿಗೆ ಮೆರಿಟ್ ಹಾಗೂ ಮೀಸಲಾತಿ ಆಧಾರದ ಮೇಲೆ ಪ್ರವೇಶ ನೀಡಲಾಗುವುದು.

೩) ಕಾಶ್ಮೀರಿ ವಲಸಿಗರು ಮತ್ತು ಕಾಶ್ಮೀರಿ ಪಂಡಿತರು / ಕಾಶ್ಮೀರಿ ಹಿಂದು ಕುಟುಂಬಗಳ ವಲಸೆರಹಿತರು ಕಾಶ್ಮೀರಿ ಕಣಿವೆಯಲ್ಲಿ ವಾಸಿಸುವವರ ಮಕ್ಕಳಿಗೆ ವಿಶ್ವವಿದ್ಯಾಲಲಯದ ಸ್ನಾತಕೋತ್ತರ ಪ್ರೋಗ್ರಾಮಗಳಲ್ಲಿ AICTE ಹಾಗೂ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಯದ ಆದೇಶದಂತೆ ಪ್ರವೇಶಾತಿಯಲ್ಲಿ ಮಿಸಲಾತಿ ನೀಡಲಾಗುವುದು.

ಆದೇಶ ಮೇರೆಗೆ,

**ಕುಲಸಚಿವರು**

**ಪ್ರೊ. ಡಾ॥ ಬಸವರಾಜ ಎಲ್. ಲಕ್ಕಣ್ಣವರ**